<u>ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>

<u>ಹಗರಿಬೊಮ್ಮನಹಳ್ಳಿ</u>

ಸಿ ಸಿ ನಂ. 836/2015

<u>ಸಾಕ್ಷಿಗೆ ದಿನಾಂಕ 04-01-2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 10 P.W.: 6

| | | |
|---|---|---|
| ಹೆಸರು | ಃ | ಮಹ್ಮದ್ ಬಶೀರ್ |
| ತಂದೆಯ ಹೆಸರು | ಃ | ದೊಡ್ಡ ಸುಭಾನ್ ಸಾಬ್ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸ ಸ್ಥಳ | ಃ | ಇಟಗಿ ಗ್ರಾಮ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಈಗ್ಗೆ 10-15 ವರ್ಷದ ಹಿಂದೆ ನಾನು ಇಟಗಿಯಿಂದ ಕೊಟ್ಟೂರು ಗ್ರಾಮಕ್ಕೆ ಹೋಗುತ್ತಿದಾಗ ದಾರಿಯಲ್ಲಿ ಪೋಲೀಸರು ನನಗೆ ಕರೆದರು. ನನ್ನನ್ನು ನಿಲ್ಲಿಸಿ ಒಂದು ಪೋಟೋ ತೆಗೆದುಕೊಂಡರು. ಒಂದು ಬಿಳಿ ಹಾಳೆ ಮೇಲೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಯಾವ ಕಾರಣಕ್ಕಾಗಿ ಪೋಲೀಸರು ಸದರಿ ಪೋಟೋ ತೆಗೆದುಕೊಂಡರು ಮತ್ತು ಯಾವ ಕಾರಣಕ್ಕಾಗಿ ನನ್ನ ಸಹಿಯನ್ನು ಪಡೆದರೆನ್ನುವುದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಮಹಜರನ್ನು ಜರುಗಿಸಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಆರೋಪಿತರು ತೋರಿಸಿದ ಕೃತ್ಯಸ್ಥಳದ ಮಹಜರಾಗಿದ್ದು ಅದರಲ್ಲಿ ಸಾಕ್ಷಿಯು ತನ್ನ ಸಹಿಗಳು ಇರುತ್ತವಂತಾ ನೋಡಿ ಗುರುತಿಸಿದ್ದು ಸದರಿ ಮಹಜರನ್ನು ನಿಪಿ-8 ಎಂದು ಮತ್ತು ಸದರಿ ಮಹಜರಿನಲ್ಲಿರುವಂತಹ ಸಾಕ್ಷಿಯ ಒಟ್ಟು 5 ಸಹಿಗಳನ್ನು ಒಟ್ಟಾರೆಯಾಗಿ ನಿಪಿ-8 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ 4 ಪೋಟೋಗಳನ್ನು ತೋರಿಸಿದ್ದು ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಆರೋಪಿ ಪರ ವಕೀಲರ ಸದರಿ ಪೋಟೋಗಳನ್ನು ನಿಶಾನೆಗೊಳಿಸಲು ತಕರಾರು ವ್ಯಕ್ತಪಡಿಸಿದ್ದು, ಸದರಿ ಪೋಟೋಗಳನ್ನು ಕಾನೂನುಸಮ್ಮತವಾಗಿ ರುಜುವಾತಿಗೆ ಒಳಪಟ್ಟು ಅವುಗಳನ್ನು ಒಟ್ಟಾರೆಯಾಗಿ ನಿಪಿ-9 ಎಂದು ಗುರುತಿಸಲಾಯಿತು. ಸದರಿ ಪೋಟೋಗಳಲ್ಲಿರುವವರನ್ನು ನೋಡಿದರೆ ನನಗೆ ಗುರುತಿಸಲಾಗುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-</u>

ದಿಃ27-06-2015 ರಂದು ಇಟಗಿ ಪೋಲೀಸರು ನನ್ನ ಮತ್ತು ಚಾಸಾ-11 ರವರ ಸಮಕ್ಷಮ ರಾತ್ರಿ 8.35 ರಿಂದ 9.05, 9.05 ರಿಂದ 9.15, 9.15 ರಿಂದ 9.25 ಮತ್ತು 9.25 ರಿಂದ 9.35 ಗಂಟೆಯವರೆಗೆ ಇಟಗಿ ಮತ್ತು ಕೊಟ್ಟೂರು ರಸ್ತೆಯ ಮಧ್ಯದಲ್ಲಿ ಬರುವ ದಿಬ್ಬದಹಳ್ಳಿ ಕ್ರಾಸಿನ ಬಳಿ ಪಂಚನಾಮೆಯನ್ನು 1 ರಿಂದ 4 ನೇ ಆರೋಪಿತರು ತೋರಿಸಿದ ಸ್ಥಳಗಳಲ್ಲಿ ಜರುಗಿಸಿದ್ದು, ಸದರಿ ಪಂಚನಾಮೆಯಲ್ಲಿರುವಂತಹ ಮಾಹಿತಿಯನ್ನು ನಾನು ತಿಳಿದುಕೊಂಡು ಸದರಿ ಪಂಚನಾಮೆಗೆ ಮೇಲ್ಕಂಡ ಸ್ಥಳಗಳಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಅದೇ ಸಮಯದಲ್ಲಿ 1 ನೇ ಆರೋಪಿತನು ಹಾಜರುಪಡಿಸಿದ ಗಾಡಿಯ ಬೀಗವನ್ನು ಪೋಲೀಸರು ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಗೆ ಪಂಚನಾಮೆಯಲ್ಲಿರುವಂತಹ ವಿವರವನ್ನು ಓದಿ ಹೇಳಲಾಗಿ ಅದನ್ನು ಸಾಕ್ಷಿಯು ಅಲ್ಲಗಳೆದಿರುತ್ತಾರೆ. ಪೋಲೀಸರು ನನ್ನ ಮತ್ತು ಚಾಸಾ-11 ರವರ ಸಮಕ್ಷಮ ಮೇಲ್ಕಂಡ ಸ್ಥಳದಲ್ಲಿ ನಿಪಿ-8 ರಂತೆ ಪಂಚನಾಮೆಯನ್ನು ಜರುಗಿಸಿದ್ದು ಆ ವಿಚಾರ ನನಗೆ ಗೊತ್ತಿದ್ದರೂ ಸಹಾ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ</u>

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ